# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಮೈಸೂರು ಮಿನರಲ್ಸ್ ನಿಯಮಿತ ಸಂಸ್ಥೆಯ ನೌಕರರಾದ ಶ್ರೀ ಹೆಚ್.ಶೇಖರಪ್ಪ, ಕಿರಿಯ ಇಂಜಿನಿಯರ್ ರವರನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ವ್ಯಾಪ್ತಿಗೆ ಗುತ್ತಿಗೆ ಆಧಾರದ ಮೇಲೆ ನೇಮಿಸುವ ಬಗ್ಗೆ - ಆದೇಶ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 51 ಜಿಪಅ 2000, ದಿನಾಂಕ. 29-12-2000.
2. ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 06 ಜಿಪಅ 2007, ದಿನಾಂಕ. 08-02-2007.
3. ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 27 ಸೇಶಿಕಾ 2007, ದಿನಾಂಕ. 16-02-2007.
4. ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 93 ಜಿಪಅ 2008, ದಿನಾಂಕ. 13-01-2009.
5. ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 53 ಜಿಪಅ 2009, ~~ದಿನಾಂಕ. 21-03-2009~~.
6. ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 87 ಸೇಶಿಕಾ 2010, ದಿನಾಂಕ. 03-06-2010.
7. ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 121 ಸೇಶಿಕಾ 2011, ದಿನಾಂಕ. 13-10-2011.
8. ಮಾನ್ಯ ಶಾಸಕರು, ತೀರ್ಥಹಳ್ಳಿ ಮತ ಕ್ಷೇತ್ರ ರವರ ಪತ್ರ ದಿನಾಂಕ 24-5-2012
9. ಶ್ರೀ ಅರಗ ಜ್ಞಾನೇಂದ್ರ, ಮಾಜಿ ಶಾಸಕರು ರವರ ಪತ್ರ ದಿನಾಂಕ 25-05-2012.
10. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಶಿವಮೊಗ್ಗ ಇವರ ಪತ್ರ ದಿನಾಂಕ 10-04-2012.

<u>ಪ್ರಸ್ತಾವನೆ:</u>

ಮೈಸೂರು ಮಿನರಲ್ಸ್ ನಿಯಮಿತ ಸಂಸ್ಥೆಯ ಕೆಲವು ತಾಂತ್ರಿಕ ವರ್ಗದ ಅಧಿಕಾರಿ / ನೌಕರರುಗಳ ಸೇವೆಯನ್ನು ಕರ್ನಾಟಕ ಸರ್ಕಾರಿ ಸೇವೆ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 15 (1) (ಬಿ) (ii) ರನ್ವಯ ಕೆಲವು ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ವ್ಯಾಪ್ತಿಯ ವಿಭಾಗ / ಉಪ ವಿಭಾಗಗಳಲ್ಲಿ ಖಾಲಿ ಇದ್ದ ಇಂಜಿನಿಯರ್ ಹುದ್ದೆಗಳಿಗೆ ಸದರಿ ಸಂಸ್ಥೆಯ ಕೆಲವು ತಾಂತ್ರಿಕ ವರ್ಗದ ಸಹಾಯಕ / ಕಿರಿಯ ಇಂಜಿನಿಯರ್‌ಗಳನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿ ತದನಂತರ ಇವರುಗಳ ಪೈಕಿ ಕೆಲವರ ಗುತ್ತಿಗೆ ಸೇವಾ ಅವಧಿಯನ್ನು ವಿಸ್ತರಿಸಿ ಓದಲಾದ ಮೇಲೆ ಕ್ರಮ ಸಂಖ್ಯೆ (2) (3) (4) (5) ಮತ್ತು (6) ಗಳಲ್ಲಿ ಆದೇಶಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (7)ರಲ್ಲಿ ಓದಲಾದ ದಿನಾಂಕ. 13-10-2011ರ ಸರ್ಕಾರದ ಆದೇಶದಲ್ಲಿ ಶ್ರೀ ಹೆಚ್.ಶೇಖರಪ್ಪ, ಕಿರಿಯ ಇಂಜಿನಿಯರ್ ರವರ ಗುತ್ತಿಗೆ ಸೇವೆಯನ್ನು ದಿನಾಂಕ. 31-03-2012ರವರಗೆ ಮುಂದುವರೆಸಿ ಆದೇಶಿಸಲಾಗಿತ್ತು.

— 2

ಮೇಲೆ ಕ್ರಮ ಸಂಖ್ಯೆ. (8) ಮತ್ತು (9)ರಲ್ಲಿ ಓದಲಾದ ದಿನಾಂಕ. 24-05-2012 ಮತ್ತು 25-05-2012ರ ಪತಗಳಲ್ಲಿ ಮಾನ್ಯ ಶಾಸಕರು, ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರ ರವರು ಮತ್ತು ಶ್ರೀ ಅರಗ ಜ್ಞಾನೇಂದ್ರ, ಮಾಜಿ ಶಾಸಕರು ರವರುಗಳು ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಒಟ್ಟು 8 ಕಿರಿಯ ಇಂಜಿನಿಯರ್ ಮತ್ತು 1 ಸಹಾಯಕ ಇಂಜಿನಿಯರ್ ಹುದ್ದೆಗಳಿದ್ದು, ಇದರಲ್ಲಿ ಹಾಲಿ 4 ಕಿರಿಯ ಇಂಜಿನಿಯರ್‌ಗಳು ಮಾತ್ರ ಕರ್ತವ್ಯನಿರ್ವಹಿಸುತ್ತಿದ್ದು, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ಕಾಮಗಾರಿಗಳು ಹಾಗೂ ಎಂ.ಜಿ.ಎನ್.ಆರ್.ಇ.ಜಿ.ಎ. ಕಾಮಗಾರಿಗಳ ನಿರ್ವಹಣೆಗೆ ಸಾಕಷ್ಟು ಇಂಜಿನಿಯರ್‌ಗಳ ಸೇವೆ ಲಭ್ಯವಿಲ್ಲದ ಕಾರಣ ಮತ್ತು ಅಭಿವೃದ್ಧಿ ಕಾಮಗಾರಿಗಳ ಹಿತದೃಷ್ಟಿಯಿಂದ ಬೇರೆ ಕಿರಿಯ ಇಂಜಿನಿಯರ್‌ಗಳನ್ನು ಸ್ಥಳನಿಯುಕ್ತಿಗೊಳಿಸುವವರೆಗೆ ಶ್ರೀ ಹೆಚ್. ಶೇಖರಪ್ಪ, ಕಿರಿಯ ಇಂಜಿನಿಯರ್ ಇವರ ಸೇವೆಯನ್ನು 2012-13ನೇ ಸಾಲಿಗೆ ತೀರ್ಥಹಳ್ಳಿಯಲ್ಲಿ ಮುಂದುವರೆಸುವಂತೆ ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (10)ರಲ್ಲಿ ಓದಲಾದ ದಿನಾಂಕ. 10-04-2012ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಶಿವಮೊಗ್ಗ ರವರು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ತೀರ್ಥಹಳ್ಳಿಗೆ ಮಂಜೂರಾಗಿರುವ 9 ಇಂಜಿನಿಯರ್‌ಗಳ ಹುದ್ದೆಯಲ್ಲಿ 4 ಇಂಜಿನಿಯರ್‌ಗಳು ಮಾತ್ರ ಕರ್ತವ್ಯನಿರ್ವಹಿಸುತ್ತಿದ್ದು, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್‌ಗಳ ಅಭಿವೃದ್ಧಿ ಕಾಮಗಾರಿಗಳು ಹಾಗೂ ಎಂ.ಜಿ.ಎನ್.ಆರ್.ಇ.ಜಿ.ಎ. ಕಾಮಗಾರಿಗಳ ನಿರ್ವಹಣೆಗೆ ಸಾಕಷ್ಟು ಇಂಜಿನಿಯರ್‌ಗಳ ಸೇವೆ ಲಭ್ಯವಿಲ್ಲದ ಕಾರಣ ಮತ್ತು ಅಭಿವೃದ್ಧಿ ಕಾಮಗಾರಿಗಳ ಹಿತದೃಷ್ಟಿಯಿಂದ ಬೇರೆ ಕಿರಿಯ ಇಂಜಿನಿಯರ್‌ಗಳನ್ನು ಸ್ಥಳನಿಯುಕ್ತಿಗೊಳಿಸುವವರೆಗೆ ಶ್ರೀ ಹೆಚ್. ಶೇಖರಪ್ಪ, ಕಿರಿಯ ಇಂಜಿನಿಯರ್ ಇವರ ಸೇವೆಯನ್ನು ಮುಂದುವರೆಸುವಂತೆ ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಶ್ರೀ ಹೆಚ್.ಶೇಖರಪ್ಪ, ಕಿರಿಯ ಇಂಜಿನಿಯರ್ ಇವರ ಗುತ್ತಿಗೆ ಸೇವೆಯನ್ನು ಮುಂದುವರೆಸಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ. ಗ್ರಾಅಪ 125 ಸೇಶಿಕಾ 2012, ಬೆಂಗಳೂರು,**
**ದಿನಾಂಕ.05-06-2012**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಿವಿಲ್ ಸೇವೆ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 15 (1) (ಬಿ) (ii) ರನ್ವಯ ಈ ಆದೇಶಕ್ಕೆ ಲಗತ್ತಿಸಿರುವ ಷರತ್ತು ಮತ್ತು ನಿಬಂದನೆಗಳಿಗೆ ಒಳಪಟ್ಟು, ಮೈಸೂರು ಮಿನರಲ್ಸ್ ನಿಯಮಿತ ಸಂಸ್ಥೆಯ ನೌಕರರಾದ ಶ್ರೀ ಹೆಚ್.ಶೇಖರಪ್ಪ, ಕಿರಿಯ ಇಂಜಿನಿಯರ್ ಇವರ ಗುತ್ತಿಗೆ ಸೇವೆಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ತೀರ್ಥಹಳ್ಳಿ ಇಲ್ಲಿನ ಕಿರಿಯ ಇಂಜಿನಿಯರ್ ಹುದ್ದೆಯಲ್ಲಿ ದಿನಾಂಕ. 01-04-2012 ರಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

5/6/12
(ಎನ್.ವೈ.ಸಾಗರ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 & 2) / (ಆಡಿಟ್)
2. ವ್ಯವಸ್ಥಾಪಕ ನಿರ್ದೇಶಕರು, ಮೈಸೂರು ಮಿನರಲ್ಸ್ ಸಂಸ್ಥೆ, ಬೆಂಗಳೂರು

3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಶೇಷಾದ್ರಿಪುರಂ, ಬೆಂಗಳೂರು,
4. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕೆ.ಆರ್.ಆರ್.ಡಿ.ಎ., ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ.
7. ಶ್ರೀ ಹೆಚ್. ಶೇಖರಪ್ಪ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ತೀರ್ಥಹಳ್ಳಿ.
8. ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
9. ಗ್ರಾ.ಅ.ಪಂ.ಇಲಾಖೆಯ ಸರ್ಕಾರದ ಪ್ರದಾನ ಕಾರ್ಯದರ್ಶಿ / ಕಾರ್ಯದರ್ಶಿ/ ಉಪ ಕಾರ್ಯದರ್ಶಿ ಇವರುಗಳ ಅಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
10. ರಕ್ಷಾ ಕಡತ / ಮಾಹಿತಿ ಕೇಂದ್ರ/ ಹೆಚ್ಚುವರಿ ಪ್ರತಿಗಳು.

<u>ಗುತ್ತಿಗೆ / ಒಪ್ಪಂದದ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳು</u>

1. <u>ಅವಧಿ:</u> ------------------------------------------ ಇವರ ಒಪ್ಪಂದದ ನೇಮಕಾತಿಯ ಅವಧಿಯು ದಿನಾಂಕ. --------. ರಿಂದ ದಿನಾಂಕ: ----------..ರವರೆಗೆ ಅಥವಾ ಮುಂದಿನ ಆದೇಶ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಇರುತ್ತದೆ.

2. <u>ಗುತ್ತಿಗೆ ನೇಮಕಾತಿಯ ಪ್ರಾರಂಭ ಹಾಗೂ ಅಂತ್ಯ :</u> ಸದರಿ ಅಧಿಕಾರಿರವರ ಒಪ್ಪಂದದ ನೇಮಕಾತಿಯು ದಿನಾಂಕ. ------------. ರಿಂದ ಪ್ರಾರಂಭಗೊಂಡು ಹುದ್ದೆಯ ಪ್ರಭಾರವನ್ನು ಹಿಂದಕ್ಕೆ ವಹಿಸಿಕೊಟ್ಟ ದಿನಾಂಕದಂದು ಮುಕ್ತಾಯಗೊಳ್ಳುತ್ತದೆ.

3. <u>ವೇತನ ಮತ್ತು ಇತರೆ ಭತ್ಯೆಗಳು:</u>------------------------------------ ಇವರು ಒಪ್ಪಂದದ ನೇಮಕಾತಿಯ ಅವಧಿಯಲ್ಲಿ ಅವರ ಮಾತೃ ಇಲಾಖೆಯಲ್ಲಿ ಪಡೆಯುತ್ತಿದ್ದ ವೇತನ, ತುಟ್ಟಿಭತ್ಯೆ, ಕಾರ್ಯನಿರ್ವಹಿಸುವ ಸ್ಥಳಕ್ಕೆ ಅನ್ವಯಿಸುವ ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ ಪಡೆಯಲು ಅರ್ಹರಿರುತ್ತಾರೆ. ಆದರೆ, ನಿಯೋಜನೆಯ ಭತ್ಯೆ ಅನ್ಯ ಸೇವಾ ಭತ್ಯೆ ಅಥವಾ ಇನ್ನಾವುದೇ ಭತ್ಯೆ, ಹೆಚ್ಚಿನ ಕಾಲದ ಭತ್ಯೆ, ಬೋನಸ್, ಅನುಗ್ರಹ ಪೂರ್ವ ಭತ್ಯೆ ಪಡೆಯಲು ಅರ್ಹರಲ್ಲ.

4. <u>ರಜಾ ನಿಯಮಗಳು:</u> ಇವರ ಮಾತೃ ಇಲಾಖೆಯಲ್ಲಿನ ರಜಾ ನಿಯಮಗಳಿಗೆ ಅರ್ಹರಿರುತ್ತಾರೆ.

5. <u>ರಜಾ ವೇತನ ವಂತಿಗೆ :</u> ಅಧಿಕಾರಿಯವರ ಮೂಲ ವೇತನದ ಶೇಕಡಾ 11 ರಷ್ಟನ್ನು ರಜಾ ವೇತನ ವಂತಿಗೆಯಾಗಿ ಸರ್ಕಾರವು ಪಾವತಿಸುತ್ತದೆ.

6. <u>ಭವಿಷ್ಯ ನಿಧಿ ವಂತಿಗೆ:</u> ಅಧಿಕಾರಿಯ ಮೂಲ ವೇತನ ಮತ್ತು ತುಟ್ಟಿಭತ್ಯೆಯ ಶೇ.12ರಷ್ಟನ್ನು ಸರ್ಕಾರದ ವತಿಯಿಂದ ವಂತಿಗೆ, ಮತ್ತು ಅಧಿಕಾರಿಯ ಮೂಲ ವೇತನ ಮತ್ತು ತುಟ್ಟಿಭತ್ಯೆಯ ಶೇಕಡಾ 12 ರಷ್ಟನ್ನು ವಂತಿಗೆಯಾಗಿ ತಿಂಗಳಿನ ಸಂಬಳದಲ್ಲಿ ಕಟಾಯಿಸಿ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಬೆಂಗಳೂರು ರವರಿಗೆ ಪಾವತಿಸತಕ್ಕದ್ದು.

7. <u>ಉಪದಾನ ವಂತಿಗೆಗಳು:</u> ಸರ್ಕಾರವು ಪ್ರತಿ ತಿಂಗಳು 8.33% ರಷ್ಟು ವೇತನ ಮತ್ತು ಅದಕ್ಕೆ ಸಮನಾದ ತುಟ್ಟಿ ಭತ್ಯೆಯೊಂದಿಗೆ ಉಪದಾನ ವಂತಿಗೆಯಾಗಿ ನೀಡುತ್ತದೆ.

8. <u>ವೈದ್ಯಕೀಯ ರಿಯಾಯಿತಿ:</u> ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963ರ ಅನ್ವಯ ವೈದ್ಯಕೀಯ ವೆಚ್ಚವನ್ನು ಪಡೆಯಲು ಅರ್ಹರಿರುತ್ತಾರೆ.

9. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ -------------------------ಹುದ್ದೆಗೆ ನಿಗಧಿಪಡಿಸಿರುವ ಕೆಲಸಗಳನ್ನು ಹಾಗೂ ಸರ್ಕಾರವು / ಮೇಲಾಧಿಕಾರಿಗಳು ಕಾಲಕಾಲಕ್ಕೆ ವಹಿಸಿಕೊಡುವ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

----2

10. 1966ರ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ ಮತ್ತು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮಾವಳಿಗೆ ಅವರು ಬದ್ಧರಾಗಿರುತ್ತಾರೆ.

11. ಈ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಗುತ್ತಿಗೆ ನೇಮಕಾತಿಯು ತಾನಾಗಿಯೇ ಮುಕ್ತಾಯವಾಗುತ್ತದೆ.

12. ______________________ ರವರು ______________ ಹುದ್ದೆಯ ಕೆಲಸ ಕಾರ್ಯಗಳನ್ನು ಶ್ರದ್ಧಾಭಕ್ತಿಯಿಂದ ನಿರ್ವಹಿಸತಕ್ಕದ್ದು ಹಾಗೂ ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಾಗ ತಿಳಿದು ಬರುವಂತಹ ಕಚೇರಿಯ ಅಧಿಕೃತ ಗೌಪ್ಯ ಮಾಹಿತಿಗಳ ಬಗ್ಗೆ ಕಟ್ಟುನಿಟ್ಟಾಗಿ ಗೌಪ್ಯತೆಯನ್ನು ಕಾಪಾಡತಕ್ಕದ್ದು.

13. ಅಧಿಕಾರಿಯ ದುರ್ನಡತೆಯಿಂದ ಸರ್ಕಾರಕ್ಕೆ ಉಂಟಾಗುವ ಯಾವುದೇ ನಷ್ಟಗಳನ್ನು ಭರಿಸಿಕೊಡಲು ಅಧಿಕಾರಿಯು ಬಾಧ್ಯತೆಯುಳ್ಳವರಾಗಿರುತ್ತಾರೆ.

14. ಈ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಏಳು ದಿನಗಳ ಒಳಗಾಗಿ ಐವತ್ತು (ರೂ. 50–00) ರೂಪಾಯಿಗಳ ಮೌಲ್ಯದ ಛಾಪಾ ಕಾಗದದಲ್ಲಿ ಸದರಿ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳನ್ನು ಒಳಗೊಂಡಿರುವ ಕರಾರು ಪತ್ರವನ್ನು ಕ್ರಮಬದ್ಧ ರೀತಿಯಲ್ಲಿ ಸದರಿ ನೌಕರರಿಂದ ಬರೆಯಿಸಿಕೊಳ್ಳತಕ್ಕದ್ದು.